ಹೊಸದಾಗಿ ಮನೆಮಾಡಿ ಸಂಬಂಧಿಕರ ಹುಡುಗಿನ್ನೇ ಮದುವೆಯಾಗಿದ್ದರು. ಏಕಾದಶಿಯ ಪ್ರಯುಕ್ತ ಹೋಂ ಬ್ರಾಂಚಿನ ದೇವರು ಸಂಪಿಗೆ ಪುರಕ್ಕೆ ಬರೋದಿತ್ತು. ಹೊಸ ಜೋಡಿಗೆ ಒಳ್ಳೇದಾಗಬೇಕು ಹೊಸಮನೆಯ ಆಯುಷ್ಯ ಹೆಚ್ಚಾಗಬೇಕು ಅಂತೇಳಿ ವಾಸುದೇವಪ್ಪನೋರು ಹೋಂ ಬ್ರಾಂಚಿನ ದೇವರು ಎಂಗೂ ಊರಿಗೇ ಬರ್ತಿದೆ ಬಂದಾಗ ಅಂಗೇ ಒಂದು ಗಳಿಗೆ ಗದ್ದುಗೆ ಮಾಡಿಸಣ ಅಂತೇಳಿ ಹೋಂ-ಬ್ರಾಂಚಿನ ದೇವರಿಗೆ ಪೂಜೆ ಕೊಡಲು ಟೈಮು-ರೇಟ್ ಫಿಕ್ಸ್ ಮಾಡಿದ್ರು.

ಹೊಸದಾಗಿ ಗೆದ್ದು ಮಂತ್ರಿಯಾಗಿದ್ದ ಪಕ್ಷೇತರನು ಸಂಪಿಗೆಪುರದ ಮಾದಿಗರಿಗೆ ಕೊಡಿಸಿದ್ದ ಲಕ್ಷ್ಮಿ-ಪದ್ಮಾವತಿ-ಎಂಕುಟೇಶ್ವರನ ಮೆರೆ ವಿಗ್ರಹವೂ ಜಿಲ್ಲೆಯ ಹೋಂ ಬ್ರಾಂಚಿನ ದೇವಾಲಯದಲ್ಲಿದ್ದ ವಿಗ್ರಹಗಳೂ ಒಂದೇ ಅಚ್ಚಿನಿಂದ ಮಾಡಿದ್ದವುಗಳಾಗಿದ್ದವು. ಮಾದಿಗರಿಗೆ ಈ ವಿಷಯ ತಿಳಿದು ನಮ್ಮ ದೇವರೂ-ಹೋಂ ಬ್ರಾಂಚಿನ ದೇವರೂ ಒಂದೇ ತರ ಅವೆ ಎಂಬ ಹೆಮ್ಮೆಯಿಂದ ಬೀಗಿದರು. ಹತ್ತಾರು ಜನ ಸೇರುವ ಜಾಗದಲ್ಲಿ ಈ ವಿಷಯವ ಎದೆ ಉಬ್ಬಿಸ್ಕಂಡು ಮಾತಾಡಿದರು. ಪ್ರತಿ ವರ್ಷ ಬರೀ ಊರೊಳ್ಳೋರ ಮಣೇವು ನೋಡ್ತಿದ್ದ ಮಾದಿಗರು ಈ ಬಾರಿ ತಮ್ಮ ದೇವರನ್ನೇ ಮಾಡ್ಕಂಡಿದ್ರು. ಹತ್ತಿರದಲ್ಲೇ ಇದ್ದ ಏಕಾಶಿ ಮಣೇವಿಗೆ ಏನೇನು ತಯಾರಿ ಮಾಡ್ಕಂಬೇಕು ಅಂತೇಳಿಯೂ ಚರ್ಚೆ ಮಾಡಿಕಂಡ್ರು. ಎಂಗೂ ಹೋಂ ಬ್ರಾಂಚಿನ ತರದ್ದೇ ಮೆರೆ ದೇವರು ನಮಗೆ ಸಿಕ್ಕೈತೆ, ಹೋಂ-ಬ್ರಾಚಿನ ದೇವುಸ್ಥಾನದ ಅರ್ಚಕರಿಗಿಂತ ಮಡಿಲೀ ನಾವೇನೂ ಕಮ್ಮಿ ಇರಬಾರದು. ಅಂತೇಳಿ ಸಂಪಿಗೆಯ ಮಾದಿಗರಟ್ಟಿಯ ಜನರೆಲ್ಲಾ ಸೇರಿ ತಮ್ಮಟ್ಟಿಲಿ ಬೆಳ್ಳಗೂ ಗುಂಡ್ಗುಂಡ್ಗೂ ಇದ್ದ ಹನ್ನೆರಡದಿಮೂರು ಹರೇದ ಹುಡುಗರನ್ನ ಹನ್ನೊಂದಿನ ದೇವಸ್ಥಾನದಲ್ಲೇ ಮಲಗಿಸಿ, ಬರೀ ಶಾಕಾಹಾರವನ್ನಷ್ಟೇ ಕೊಡುತ್ತಾ ನೇಮದಲ್ಲಿರಿಸಿದ್ದರು. ಈ ಹುಡುಗರೇ ಬೆಂಗಳೂರಿನಿಂದ ತಂದಿದ್ದ ಅರ್ಚಕರ ಬಟ್ಟೆಗಳನ್ನ, ಜನಿವಾರವನ್ನ ಹಾಕ್ಕೊಂಡು ದೇವರನ್ನ ಹೊರೋದರಿಂದ ಹಿಡಿದು ಅದರ ಪೂಜೆ-ಪುನಸ್ಕಾರ ಎಲ್ಲಾ ನೀವೇ ನೋಡ್ಕಂಬೇಕು ಎಂದು ಕುಲಸ್ಥರ ಮುಂದೆ ತಾಕೀತು ಮಾಡಿದ್ರು. ಅದರಲ್ಲಿ ಮೂರು ಜನ ಮಂತ್ರದ ಬುಕ್ ಹಿಡಕಂಡು ಒರಿಜಿನಲ್ ಅರ್ಚಕರರಿಗೂ ಕಮ್ಮೀ ಇಲ್ಲದ ರಾಗದಲ್ಲಿ ಮಂತ್ರುವ ಹೇಳದಾ ಕಲ್ತಕಂಡಿದ್ರು.

* * *

ಆ-ಶುಭ ದಿವಸ ಮಾದಿಗರೆಲ್ಲಾ ತಮ್ಮ ಹೊಚ್ಚೊಸ ಮೆರೆದೇವರನ್ನು ಸಿಂಗಾರ ಮಾಡಿಕೊಂಡು ಕಡಿಮೆ ರೇಟಿಗೆ ಫಿಕ್ಸು ಮಾಡಿದ ಮಂಗಳ ವಾದ್ಯವನ್ನ ಬಡಕಂಡು ಕಲ್ಲೂ-ನೀರು ಕರಗೋ ಹೊತ್ತಿನಾಗೆ ಸಂಪಿಗೆಯ ಅಂಚಿನ ರೋಡಲ್ಲಿ ಮೆರೆದೇವರನ್ನು ಕೆರೆ ಏರಿ ಮ್ಯಾಕೆ ತಕ್ಕಂಡೋಗಿ ಪುಣಾವಾದ್ನೆ ಮಾಡ್ಕಂಡು, ಬರೂವಾಗ ಮಾತ್ರ ಊರೊಳ್ಳೋರ ಏರಿಯಾದೊಳಕ್ಕೆ ನುಗ್ಗಿದರು. ಇತ್ತ ವಾಸುದೇವಪ್ಪನೋರ ಮನೆಯಲ್ಲಿ ಹೋಂ ಬ್ರಾಂಚಿನ ದೇವರ ಸೇವೆಗಾಗಿ ಸಕಲ ಸಿದ್ದತೆಗಳೂ ನಡೆಯುತ್ತಿದ್ದವು. ಮೇನ್ ಬ್ರಾಂಚಿಂದ ಬರಬೇಕಿದ್ದ ದೇವರುಗಳು ತಡವಾಗಿ ವಾಸುದೇವಪ್ಪನೋರ ಗಂಡು ಪರಿವಾರವೆಲ್ಲಾ ದೇವರನ್ನು ಕರೆತರಲು ಮನೆಯಿಂದ ಮುಖ್ಯರಸ್ತೆಗೆ ಹೋಗಿ ನಿಂತ್ಕಂಡಿದ್ರು. ಯಾವಾಗ ಮಂಗಳ ವಾದ್ಯದೊಂದಿಗೆ ಇನ್ನೊಂದು ರೋಡಿಂದ ಮಾದಿಗರ ದೇವರು ವಾಸುದೇವಪ್ಪೋರ ಮನೆ ಮುಂದಲ ರೋಡಲ್ಲಿ ಬರ್ತಾ ಇರೋದನ್ನ ನೋಡಿದ ವಾಸುದೇವಪ್ಪನೋರ ಹೊಸ ಸೊಸೆ ಒಳೀಕೋಗಿ ಅತ್ತೇನಾ ಕರೆದಾಗ 'ನಾನು ಆರತಿ ತರ್ತಿನೀ ನೀನು ಕಾಲಿಗೆ ನೀರಾಕಿ ಒಳೀಕೆ ಕಕ್ಕೋ ಹೋಗು' ಎಂದಳು.

ಮಾದಿಗರ ಎಂಕುಟೇಶ ವಾಸುದೇವಪ್ಪನೋರ ಮನೆ ಬಾಗಿಲತಕ್ಕೆ ಬತ್ತಿಂದಂಗೆ ವಾಸುದೇವಪ್ಪನೋರ ಹೊಸ ಸೊಸೆ ಆ ದೇವರಿಗೆ ಅಡ್ಡನಿಂತು ಪೂಜೆ ಕೊಡೋಕೆ ಬಂದ್ಲು. ಮಾದಿರೆಲ್ಲಾ ಬ್ಯಾಡ್-ಬ್ಯಾಡಾ ಅಂದ್ರು ಕಾಲಿಗೆ ನೀರಾಕಿಳು. ಆಟೊತ್ಗೆ ಬಾಗಿಲಿಗೆ ಬಂದ ಯಜಮಾನಮ್ಮನೋರು ಬರ್ರಿ..ಬರ್ರೀ ಅಂದ್ರು. ಮುಖಾ-ಮುಖಾ ನೋಡಿಕಂಡ ಮಾದಿಗರ ಹುಡುಗರೆಲ್ಲಾ ಕಣ್ಣು ಬಾಯಿ ಬಿಡ್ತಿರ್ಬೇಕಾದ್ರೆ ದೇವರು ಹೊತ್ತಿದ್ದ ಹುಡುಗರು ಇಂದುಕ್ಕೂ-ಮುಂದುಕ್ಕೂ ಜಗ್ಗಾಡಿ ಯಾವ್ದೋ ನೂಕಲು ಬಂದಂಗಾಗಿ ಸೀದಾ ಹೊಸಮಾನೆ ಒಳೀಕೆ ದೇವರನ ಹಿಡಕಂಡು ಅತ್ತ-ಇತ್ತ ನೋಡಿ ಗದ್ದಿಗೆ ಮಾಡಾಕಂತ ಇದ್ದ ಜಾಗಕ್ಕೆ ತಕ್ಕಂಡೋಗಿ ದೇವರನ್ನ ಕೂರಿಸೇ ಬಿಟ್ರು. 'ಭೇದ-ಭಾವ ನಮಗಿದ್ದದ್ದು ದೇವರಿಗಿದ್ದದಾ' ಹಟ್ಟಿಯ ಹಳೇ ತಲೆಗುಳೆಲ್ಲ ತಮ್ಮ ಹೊಸದೇವರನ್ನು ಅಷ್ಟೇ